ಮತ್ತು ಬೆವರು ಕಾಣದಾಯಿತು. ಎಲ್ಲೆ ಇಲ್ಲದ ಅದ್ಭುತ ಸಾಮ್ರಾಜ್ಯದ ಸಾಮ್ರಾಟನಾಗಿದ್ದ ಅವನು, "ಯಾರಲ್ಲಿ?" ಎಂದು ಹೂಂಕರಿಸಿದ. ''ಪ್ರಭು'' ಎಂದು ಕೈ ಮುಗಿದು ತಲೆ ಬಾಗಿಸಿದ ಕಿಂಕರರು ಹಾಜರಾದರು. "ಆ ಘನಿ ಮತ್ತು ಅವನ ಮಗ ಇನಾಯತ್‌ನನ್ನು ಎಳೆದು ತನ್ನಿ" ಎಂದು ಅವನು ಆದೇಶಿಸಿದ. ಕೂಡಲೇ ಅವರಿಬ್ಬರನ್ನೂ ಕೂಡ ಹೆಡೆಮುರಿ ಕಟ್ಟಿ ತಂದ ಬಂಟರು ಸಾಮ್ರಾಟನ ಎದುರಿಗೆ ಕೆಡವಿದರು. ಅವನು ಇನ್ನೇನು ವಿಚಾರಣೆಯನ್ನು ಆರಂಭಿಸಿ ಅವರ ತಲೆದಂಡದ ಆದೇಶವನ್ನು ಹೊರಡಿಸಬೇಕು ಎಂದು ಆಲೋಚನೆಯನ್ನು ಮಾಡುವಷ್ಟರಲ್ಲಿ ಅವನ ಕೈಗಾಡಿಯ ಬಳಿ ನೆರಳೊಂದು ಗಾಢವಾಯಿತು.

ಹಣ್ಣು ತುಂಬಿದ ಕೈ ಗಾಡಿಯೊಂದು ಅವನ ಪ್ರಜ್ಞಾವಲಯದಲ್ಲಿ ಜಾಗೃತವಾಗುತ್ತಿದ್ದಂತೆ ಕಪ್ಪು ದ್ರಾಕ್ಷಿಯ ರಸಧಾರೆಯಲ್ಲಿ ಮೀಯುತ್ತಿದ್ದ ಖಲಂದರ್‌ನನ್ನು ತಾಯಿಯ ಗರ್ಭದಿಂದ ಶಿಶುವನ್ನು ಹೊರದಬ್ಬಿದಂತೆ ಹೊರಗೆಸೆದು ಚಿನ್ನದ ಬಾಗಿಲು ಬಂದಾಯಿತು. ಕಕ್ಕಾಬಿಕ್ಕಿಯಾದ ಖಲಂದರ್ ಸಾವರಿಸಿಕೊಂಡು ಸುತ್ತಲಿನ ನೋಟವನ್ನು ಗುರುತಿಸಿಕೊಂಡು, ತಾನಿರುವ ಪರಿಸರವನ್ನು ಕಂಡುಕೊಳ್ಳುತ್ತಾ ಇದ್ದಾಗ ಎದುರಿಗೆ ಕಂಡವನು ನಾಯಕ. ಅವನನ್ನು ಕಂಡವನೇ ಖಲಂದರ್ ಹೇಸಿಗೆ ಪಟ್ಟುಕೊಂಡ. ಅದರ ಹಿನ್ನೆಲೆಯಲ್ಲಿ ಅಪಾಯದ ಕರೆಗಂಟೆ ಕೂಡಾ ಮೊಳಗತೊಡಗಿತು. ಅಸಲಿಗೆ ಅವನ ಹೆಸರು ವಿನಾಯಕ ಎಂದಿತ್ತು. ಅವನ ನಾಮಕರಣದ ದಿನದಂದು ಅವನ ಅಪ್ಪನಾದ ಸಂಜೀವಣ್ಣ ಆತ್ಮೀಯವಾಗಿ ಖಲಂದರ್‌ನನ್ನು ಕೂಡಾ ಊಟಕ್ಕೆ ಆಹ್ವಾನಿಸಿದ್ದ. ಹೀಗಾಗಿ, ವಿನಾಯಕ

